**ಇಂದು ದಿನಾಂಕ 18.07.2025 ರಂದು ಪಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

**1.** ನಾನು 1987 ರಲ್ಲಿ ಹುಟ್ಟಿದ್ದೇನೆ. ನನ್ನ ತಂದೆ ಮೃತರಾದ ನಂತರ ನಾನು ಪಕ್ಷಗಾರನಾದ ಕಾರಣ ದಾವೆಯ ವಿಚಾರ ಗೊತ್ತು. ಅದಕ್ಕೂ ಮೊದಲು ನನ್ನ ತಂದೆ ಚಿಕ್ಕಪ್ಪಂದಿರು ದಾವೆಯನ್ನು ನಡೆಸುತ್ತಿದ್ದರು ಎಂದರೆ ನಿಜ. ಗೋಪಾಲ್‌ರವರು ಏನು ವಿಚಾರಣೆ ಕೊಟ್ಟಿದ್ದಾರೆ ಎಂದು ಗೊತ್ತು. ಅವರ ಪಾಟಿ ಸವಾಲು ಸಹ ನನಗೆ ಗೊತ್ತು. ಪಾಟಿ ಸವಾಲಿನ ಕೆಲವು ವಿಚಾರಗಳಿಗೆ ನನ್ನ ತಕರಾರು ಇದೆ. ನಾವು ಕೊಟ್ಟಿರುವುದು ವಾರಕ್ಕೆ ಆದರೆ ಅವರು ವಿಲ್ ಎಂದು ಹೇಳಿದ್ದಾರೆ. ಸರ್ವೆ ನಂ.43 ಮತ್ತು 136/1 ನ್ನು ವಾರಕ್ಕೆ ಕೊಟ್ಟಿದ್ದೇವೆ. ಸರ್ವೆ ನಂ.136/1 ನ್ನು ಮೃತ 1 ನೇ ಪ್ರತಿವಾದಿಗೆ ವಾರಕ್ಕೆ ಕೊಟ್ಟಿದ್ದಾರೆ. 1995-96 ರಲ್ಲಿ ಕೊಟ್ಟಿದ್ದಾರೆ. ವಾರಕ್ಕೆ ಮುನಿವೆಂಕಟಪ್ಪನ ಮಕ್ಕಳು ಕೊಟ್ಟಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆ ಇಲ್ಲ. ನನ್ನ ಪ್ರಕಾರ ಪೆಮ್ಮರೆಡ್ಡಿರವರು 5 ವರ್ಷ ಸ್ವಾಧೀನದಲ್ಲಿ ಇದ್ದರು. ವಿಲ್‌ನ ಆಧಾರದ ಮೇಲೆ ಖಾತೆ ಮಾಡಿಕೊಂಡಿರುವ ಕಾರಣ ದಾವೆ ಹಾಕಿದ್ದೇನೆ. ವಾರಕ್ಕೆ ಕೊಟ್ಟ ಬಗ್ಗೆಯೂ ಸಹ ಹಾಕಿದ್ದೇನೆ. 2002-03 ರಲ್ಲಿ ನಾವು ಅವರ ಕಡೆಯಿಂದ ಸ್ವಾಧೀನವನ್ನು ವಾಪಸ್ಸು ಪಡೆದೆವು. ಅದಕ್ಕೆ ಸಂಬಂಧಿಸಿದಂತೆ ದಾಖಲೆ ಇಲ್ಲ. ಈ ದಾವೆಯನ್ನು 2006 ರಲ್ಲಿ ಹಾಕಿದ್ದೇನೆ. ಸ್ವಾಧೀನವನ್ನು ವಾಪಸ್ಸು ಪಡೆದ ಬಗ್ಗೆ ದಾವೆಯಲ್ಲಿ ತಿಳಿಸಿದದ್ದೀರ ಎಂದರೆ ನಮ್ಮ ಚಿಕ್ಕಪ್ಪ ತಿಳಿಸಿರಬಹುದು ಎನ್ನುತ್ತಾರೆ. ವಾರಕ್ಕೆ ಕೊಟ್ಟಿದ್ದೇವೆ, ವಾರಕ್ಕೆ ಕೊಟ್ಟಿದ್ದನ್ನು ವಾಪಸ್ಸು ಪಡೆದಿದ್ದೇವೆ ಎಂದು ನಾವು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ನಿಜ. ಬಿಡಿಸಿಕೊಂಡಿದ್ದರ ಬಗ್ಗೆ ನಾನು ಪಾಲುದಾರನಾಗಿದ್ದೆನು. ಈಗ ಖಾತೆ ಪೆಮ್ಮರೆಡ್ಡಿರವರ ಹೆಸರಿನಲ್ಲಿದೆ. ವಿಲ್ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿದ್ದಾರೆ. 1993-94 ರಲ್ಲಿ ಖಾತೆ ಆಗಿದೆ. ಖಾತೆಯನ್ನು ಬೇರೆ ಎಲ್ಲೂ ನಾವು ಪ್ರಶ್ನಿಸಿಲ್ಲ. ಯಾವ ಆಧಾರದ ಮೇಲೆ ಮ್ಯೂಟೇಶನ್ ಆಗಿದೆ ಎಂದು ಗೊತ್ತು. ಪೆಮ್ಮರೆಡ್ಡಿರವರು ಅದರ ಮೇಲೆ ಸಾಲ ಪಡೆದಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಮುನಿವೆಂಕಟಪ್ಪ ಪೆಮ್ಮರೆಡ್ಡಿರವರಿಗೆ ವಿಲ್ ಮಾಡಿದ್ದಾರೆ ಎಂದು ಮಾಹಿತಿ ಇದೆ. ವಿಲ್‌ನ ಸಾಕ್ಷಿದಾರರು ಮತ್ತು ಅದರ ತಯಾರಕರು ಯಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನವರನ್ನು ಅದರ ಬಗ್ಗೆ ಕೇಳಿದ್ದೇನೆ ಗೊತ್ತಿಲ್ಲ ಎಂದರು. 2007-08 ರಲ್ಲಿ ಆ ವಿಚಾರವನ್ನು ಕೇಳಿದ್ದೇನೆ. ಮುನಿವೆಂಕಟಪ್ಪನವರು ಪೆಮ್ಮರೆಡ್ಡಿರವರಿಗೆ ಜಿ.ಪಿ.ಎ. ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ಜಿ.ಪಿ.ಎ. ಬಗ್ಗೆ ದಾವೆಯಲ್ಲಿ ತಿಳಿಸಿರುವ ಬಗ್ಗೆ

ನನಗೆ ಮಾಹಿತಿ ಇಲ್ಲ. ಜಿ.ಪಿ.ಎ.ಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಇದ್ದ ಬಗ್ಗೆ ಗೊತ್ತ ಎಂದರೆ ಅದನ್ನು ರದ್ದು ಮಾಡಿಕೊಂಡು ಬಂದರು ಎನ್ನುತ್ತಾರೆ. ಅದರ ಜಿ.ಪಿ.ಎ.ನ್ನು ನೋಡಿಲ್ಲ. ಅದು ಯಾವ ವರ್ಷದೆಂದು ಗೊತ್ತಿಲ್ಲ. ಮುನಿವೆಂಕಟಪ್ಪ ಅವರ ಜೀವಿತಾವಧಿಯಲ್ಲಿ ಜಿ.ಪಿ.ಎ.ನ್ನು ಪ್ರಶ್ನೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಪೆಮ್ಮರೆಡ್ಡಿ 1993 ರಿಂದ ದಾವಾ ಸ್ವತ್ತಿನ ಬಗ್ಗೆ ಹಕ್ಕು ಚಲಾಯಿಸುತ್ತಿದ್ದ ಬಗ್ಗೆ ಗೊತ್ತಿತ್ತು. ವಾರಕ್ಕೆ ಕೊಟ್ಟಿದ್ದರು. ಪೆಮ್ಮರೆಡ್ಡಿ ವಾರಕ್ಕೆ ಸಂಬಂಧಿಸಿದಂತೆ ಯಾವುದೇ ಗೇಣಿ ಅರ್ಜಿ ಹಾಕಿರಲಿಲ್ಲ. ವಾರವನ್ನು ರದ್ದು ಪಡಿಸಲು ನಾವು ಗೇಣಿ ಅರ್ಜಿ ಹಾಕಿರಲಿಲ್ಲ ಏಕೆಂದರೆ ನಾವೇ ಸ್ವಾಧೀನದಲ್ಲಿದ್ದೆವು. ಸರ್ವೆ ನಂ.43, 5 ಎಕರೆ 24 ಗುಂಟೆ ಮುನಿವೆಂಕಟಪ್ಪನವರ ಜಮೀನು. ಅದು ಈಗ ಗೋವಿಂದಪ್ಪನ ಮಗ ನಾರಾಯಣಪ್ಪನ ಹೆಸರಿನಲ್ಲಿ ಇದೆ ಎಂದರೆ ನಿಜ. ವಿಲ್ ಆಧಾರದ ಮೇಲೆ ಅವರ ಹೆಸರಿಗೆ ಹೋಗಿದೆ. ಅದಕ್ಕೆ ಸಂಬಂಧಿಸಿದಂತೆ ಪ್ರಕರಣ ಇದೆ. 2022 ರಲ್ಲಿ ಹಾಕಿದ್ದೇವೆ. ಗೋಪಾಲಪ್ಪನವರು ನಾರಾಯಣಪ್ಪನವರಿಗೆ ನನ್ನ ತಂದೆ ಸ್ವಾಧೀನವನ್ನು ಕೊಟ್ಟಿದ್ದ ಬಗ್ಗೆ ನನಗೆ ಗೊತ್ತಿದೆ ಎಂದರೆ ವಾರಕ್ಕೆ ಕೊಟ್ಟಿದ್ದರು ಎನ್ನುತ್ತಾರೆ. ಬೆಳೆ ಬೆಳೆಯಲು ಮಾತ್ರ ಕೊಟ್ಟಿದ್ದೆವು. ಸ್ವಾಧೀನ ಕೊಟ್ಟಿಲ್ಲ. ಆ ಸ್ವತ್ತನ್ನು ನೀವಾಗಲಿ ನಿಮ್ಮ ತಂದೆ ಚಿಕ್ಕಪ್ಪಂದಿರಾಗಲಿ ಬಿಡಿಸಿಕೊಂಡಿಲ್ಲ ಎಂದರೆ ನಾವೇ ಸ್ವಾಧೀನದಲ್ಲಿದ್ದೇವೆ ಎನ್ನುತ್ತಾರೆ. ನನ್ನ ತಾತ ದಿನಾಂಕಃ15.02.1993 ರಲ್ಲಿ ಮೃತರಾಗಿದ್ದಾರೆ ಎಂದರೆ ನಿಜ. ಅವರ ಮರಣ ನಂತರ ಮರಣ ಪ್ರಮಾಣ ಪತ್ರವನ್ನು ಪಡೆದಿಲ್ಲ. ನಿಪಿ-14 ನ್ನು 2019 ರಲ್ಲಿ ನಾವು ನ್ಯಾಯಾಲಯದ ಮೂಲಕ ಪಡೆದಿದ್ದೇವೆ. ನಾನು ಮುನಿವೆಂಕಟಪ್ಪನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ನನ್ನ ಜೊತೆಯಲ್ಲಿ ಸಹಿ ಹಾಕಿರುವ ದಾಖಲೆ ನನ್ನ ಹತ್ತಿರ ಇದೆ. ನನಗೆ 1993 ರಲ್ಲಿ 7 ವರ್ಷ ವಯಸ್ಸು. ಆ ದಾಖಲೆಯನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ. ನಾನು ವಿಲ್‌ನಲ್ಲಿರುವ ಸಹಿಯನ್ನು ನೋಡಿಲ್ಲ. ಆದ್ದರಿಂದ ವಿಲ್‌ನ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಮುನಿವೆಂಕಟಪ್ಪನವರು ಪೆಮ್ಮರೆಡ್ಡಿರವರಿಗೆ ವಿಲ್ ಬರೆದುಕೊಟ್ಟಿರುವುದು ಸುಳ್ಳು. ಆ ವಿಲ್ ದಾವಾ ಆಸ್ತಿಗೆ ಸಂಬಂಧಿಸಿದೆ ಎಂದರೆ ನಿಜ. ನಿಪಿ-1 ರ ಬಗ್ಗೆ ನನಗೆ ಗೊತ್ತು. ನಿಪಿ-1 ರಲ್ಲಿ ಮುನಿವೆಂಕಟಪ್ಪನವರ ಸಹಿ ಇದೆ. ಮುನಿವೆಂಕಟಪ್ಪನವರಿಗೆ ಅರ್ಜಿ ಸಲ್ಲಿಸಿದ ಆಧಾರದ ಮೇಲೆ ದಾವಾ ಆಸ್ತಿ ಗ್ರ್ಯಾಂಟ್ ಆಗಿದೆ ಎಂದರೆ ನಿಜ. ಖಾತೆಯಲ್ಲಿ ಕೆ. ವೆಂಕಟಪ್ಪ ಎಂದು ಇರುವುದು ಯಾರು ಎಂದರೆ ಅವರು ನಮ್ಮ ಊರಿನವರು ಎನ್ನುತ್ತಾರೆ. ಪೆಮ್ಮರೆಡ್ಡಿರವರ ತಂದೆಯ ಹೆಸರು ವೆಂಕಟಪ್ಪ. ವೆಂಕಟಪ್ಪನವರ ಹೆಸರು ಖಾತೆಯಲ್ಲಿ ಏಕೆ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಮೊದಲಿನಿಂದಲೂ ಪೆಮ್ಮರೆಡ್ಡಿರವರ ತಂದೆಯ ಆಸ್ತಿಯ ಸ್ವಾಧೀನದಲ್ಲಿದ್ದ ಕಾರಣ ಅವರ ಹೆಸರು ಬರುತ್ತಿತ್ತು

ಎಂದರೆ ಸುಳ್ಳು. ಆದ ಕಾರಣ ಮುನಿವೆಂಕಟಪ್ಪನವರು 1980 ರಲ್ಲಿ ಜಿ.ಪಿ.ಎ.ನ್ನು ಬರೆದುಕೊಟ್ಟು ಪೆಮ್ಮರೆಡ್ಡಿರವರಿಗೆ ಸ್ವಾಧೀನ ಬಿಟ್ಟುಕೊಟ್ಟರು ಎಂದರೆ ಸುಳ್ಳು. ಅವರ ಮಕ್ಕಳು ತೊಂದರೆ ಮಾಡುತ್ತಾರೆ ಎಂಬ ಕಾರಣ ದಿನಾಂಕಃ 12.10.1980 ರಂದು ಪೆಮ್ಮರೆಡ್ಡಿರವರಿಗೆ ವಿಲ್ ನ್ನು ಬರೆದುಕೊಟ್ಟರು ಎಂದರೆ ಸುಳ್ಳು. ಮುನಿವೆಂಕಟಪ್ಪನವರ ಮರಣ ನಂತರ ವಿಲ್ ಆಧಾರದ ಮೇಲೆ ಪೆಮ್ಮರೆಡ್ಡಿರವರಿಗೆ ಖಾತೆ ಆಗಿದೆ ಎಂದರೆ ನಿಜ. ಮುನಿವೆಂಕಟಪ್ಪನವರ ಇತರ ಆಸ್ತಿಗಳ ಮೇಲೆ ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಖಾತೆ ಮಾಡಿಸಕೊಂಡರು ಎಂದರೆ ಸರಿಯಲ್ಲ. ನನಗೆ 2020-21 ರಂದು ಪೆಮ್ಮರೆಡ್ಡಿರವರು ಖಾತೆ ಮಾಡಿಸಿಕೊಂಡ ಬಗ್ಗೆ ತಿಳಿಯಿತು. ಸರ್ವೆ ನಂ.43 ಮತ್ತು 136/1 ನ್ನು ಹೊರತುಪಡಿಸಿ ಮುನಿವೆಂಕಟಪ್ಪನಿಗೆ ಇನ್ನು ಆಸ್ತಿಗಳು ಇದ್ದವು. ಸಂಜೀವಮ್ಮ ನಮ್ಮ ವಿರುದ್ಧ ದಾವೆ ಹಾಕಿ ಈ ಎರಡು ಸರ್ವೆ ನಂಬರ್‌ಗಳನ್ನು ಸೇರಿಸಿರಲಿಲ್ಲಿ ಎಂದರೆ ಸ್ವಯಾರ್ಜಿತ ಆಸ್ತಿಗಳಾದ ಕಾರಣ ಸೇರಿಸಿರಲಿಲ್ಲ ಎನ್ನುತ್ತಾರೆ. ಮುನಿವೆಂಕಟಪ್ಪನ ಇತರ ಆಸ್ತಿಗಳ ಮೇಲೆ 2022 ರಲ್ಲಿ ಖಾತೆ ಮಾಡಿಸಿಕೊಂಡಿದ್ದಾರೆ. ಮುನಿವೆಂಕಟಪ್ಪನ ಮಕ್ಕಳು ಮತ್ತು ಮೊಮ್ಮಕ್ಕಳು ಬೇರೆ ಬೇರೆ ವಾಸಿಸುತ್ತಿದ್ದಾರೆ, ಬೇರೆ ಬೇರೆ ಪಡಿತರ ಚೀಟಿ ಇದೆ ಎಂದರೆ ನಿಜ. 2010 ರಿಂದ ಬೇರೆ ಬೇರೆ ಇದ್ದಾರೆ. ಮುನಿವೆಂಕಟಪ್ಪನ ಮಕ್ಕಳು ಸ್ವತಂತ್ರವಾಗಿ ಯಾವ ಆಸ್ತಿಗಳ ಮೇಲೆ ಏನು ವ್ಯವಹಾರ ಮಾಡಿದ್ದಾರೆ ಎಂದು ಗೊತ್ತಿಲ್ಲ. ರಂಗಸ್ವಾಮಿ, ಗೋವಿಂದಪ್ಪ ಮತ್ತು ವೆಂಕಟೇಶ್‌ರವರು ಸ್ವಂತಂತ್ರವಾಗಿ ವ್ಯವಹಾರ ಮಾಡಿದ್ದಾರೆ ಎಂದರೆ ಒಟ್ಟಿಗೆ 5 ಜನ ಕುಳಿತುಕೊಂಡು ಮಾಡಿದ್ದಾರೆ ಎನ್ನುತ್ತಾರೆ. ಖಾತೆ ಜಂಟಿಯಾಗಿದೆ. ವೆಂಕಟೇಶ್ ರವರು ಖಾತೆ ಆಧಾರದ ಮೇಲೆ ಬ್ಯಾಂಕ್ ಸಾಲ ಪಡೆದಿದ್ದಾರೆ. ಅದನ್ನು ಉಳಿಕೆ ಅಣ್ಣ-ತಮ್ಮಂದಿರು ಯಾರು ಪ್ರಶ್ನೆ ಮಾಡಿಲ್ಲ ಎಂದರೆ ಎಲ್ಲರನ್ನೂ ಕೇಳಿ ಪಡೆದಿದ್ದಾರೆ ಎನ್ನುತ್ತಾರೆ. ವೆಂಕಟೇಶ್‌ರವರು ಮಾಡಿರುವ ವ್ಯವಹಾರಗಳಿಗೆ ಅವರ ತಮ್ಮಂದಿರು ಭಾಗೀದಾರರು ಅಲ್ಲ ಸಾಕ್ಷಿದಾರರು ಅಲ್ಲ ಎಂದರೆ ಅವರು ದೊಡ್ಡವರಾದ ಕಾರಣ ಅವರ ಹೆಸರಿನಲ್ಲಿ ಮಾಡಿದ್ದಾರೆ ಎನ್ನುತ್ತಾರೆ. ಮುನಿವೆಂಕಟಪ್ಪನವರು ಸ್ವಂತಂತ್ರವಾಗಿ ಸಾಕಷ್ಟು ವ್ಯವಹಾರಗಳನ್ನು ಮಾಡಿದ್ದಾರೆ ಎಂದರೆ ಮಕ್ಕಳನ್ನು ಕೇಳಿ ಮಾಡಿದ್ದಾರೆ. ಅವರು ಬರೆದಿರುವ ದಾಖಲೆಗಳಿಗೆ ಮಕ್ಕಳು ಸಹಿದಾರರಲ್ಲ. ಮುನಿವೆಂಕಟಪ್ಪನವರು ಬದುಕಿದ್ದಾಗ ಅವರು ಬರೆದುಕೊಟ್ಟಿರುವ ದಾಖಲೆಗಳನ್ನು ಯಾವಾಗಲೂ ಪ್ರಶ್ನೆ ಮಾಡಿಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**

**ದೇವನಹಳ್ಳಿ.**